## ಚೇಂಜ್

ಪರಮೇಶಿ ದೇವಸ್ಥಾನಕ್ಕೆ ಹೋಗಿ ತೀರ್ಥ–ಪ್ರಸಾದ ತೆಗೆದುಕೊಂಡು ಹೊರಗೆ ಬಂದ. ಅಲ್ಲೊಬ್ಬ ಭಿಕ್ಷುಕ ನಿಂತಿದ್ದ. ದಯನೀಯವಾಗಿ, 'ಸ್ವಾಮಿ... ಎರಡು ದಿನಗಳಿಂದ ಏನೂ ತಿಂದಿಲ್ಲ. ದಯವಿಟ್ಟು ಧರ್ಮ ಮಾಡಿ' ಎಂದು ಗೋಗರೆದ. ಪರಮೇಶಿ ಜೇಬಿನಿಂದ ಐನೂರು ರೂಪಾಯಿಯ ನೋಟು ತೆಗೆದು ಆತನಿಗೆ, 'ನಾನೂರು ರೂಪಾಯಿ ಚಿಲ್ಲರೆ ಇದೆಯಾ?' ಎಂದು ಕೇಳಿದ. ತಕ್ಷಣ ಆ ಭಿಕ್ಷುಕ, 'ಹಾಂ... ಇದೆ ಸ್ವಾಮಿ...' ಎಂದು ಜೇಬಿಗೆ ಕೈ ಹಾಕುವಷ್ಟರಲ್ಲಿ ಪರಮೇಶಿ, 'ಹಾಗಿದ್ದರೆ, ಆ ದುಡ್ಡಲ್ಲಿ ಏನಾದರೂ ತಿಂದುಕೊ, ಎರಡು ದಿನದಿಂದ ಯಾಕೆ ಉಪವಾಸ ಇದ್ದೀಯ?' ಎಂದು ಹೇಳಿ ಮುಂದೆ ಹೋದ.

**ಅರವಿಂದ ಜಿ. ಜೋಷಿ**





## ಸಿದ್ದು ಅವತಾರ

ಸಿದ್ದು ಫ್ರಿಜ್ ತೆಗೆದು ಐಸ್ ಕ್ರೀಂಗಾಗಿ ಹುಡುಕುತ್ತಿದ್ದ. ಅದನ್ನು ಗುರುತಿಸಿದ ಅವನ ತಾಯಿ, 'ಅನ್ನ ಆಗಿದೆ ಇರೊ, ಸ್ವಲ್ಪ ಆರಲಿ, ಊಟ ಮಾಡಿದ ಮೇಲೆ ಐಸ್ ಕ್ರೀಂ ತಿನ್ಬೇಕು' ಎಂದಳು. 'ಸರಿ, ಅನ್ನ ಆರೋವರೆಗೂ ಒಂದು ಆಟ ಆಡೋಣ' ಎಂದ ಸಿದ್ದು. 'ತಾಯಿ, ಸರಿ ಅದೇನು ಆಟ ಹೇಳು' ಅಂದಳು. 'ನಾನು ಅಜ್ಜಿ, ನೀನು ಅಮ್ಮ... ಸರಿನಾ? ಈಗ ನಾನು ಅಜ್ಜಿ ಆಗಿ ಬರ್ತೀನಿ ತಾಳು' ಎಂದವನೇ ಒಳಗೆ ಹೋಗಿ ಅಜ್ಜಿಯ ಸೀರೆಯೊಂದನ್ನು ಸುತ್ತಿಕೊಂಡು, ಹಣೆಗೆ ಬೊಟ್ಟು ಇಟ್ಟುಕೊಂಡು, ಅಜ್ಜಿ ಅವತಾರದಲ್ಲಿ ಹೊರಗೆ ಬಂದು ಕೂಗಿದ, 'ಅದೇನೇ ನಿಂದು ರಗಳೆ? ಪಾಪ, ಮಗು ಐಸ್ ಕ್ರೀಂ ತಿನ್ಬೇಕು ಅಂತಿದೆ. ಎಲ್ಲಿಟ್ಟಿದ್ದೀಯೊ, ತೆಗೆದು ಕೊಡಬಾರದಾ? ಎಲ್ಲಾದರಲ್ಲೂ ನಿಂದೇ ಆಗಬೇಕಾ?' ಎಂದು ದಬಾಯಿಸಿದ ಪರಿಗೆ ಅವನ ತಾಯಿ ಬೆಪ್ಪಾದಳು.

**ಜಗದೀಶ ದಲಭಂಜನ**

ಕಲೆ: ಗಣೇಶ ಆಚಾರ್ಯ